ಓ .ಎಸ್ .ನಂಃ24/2012 ಪಿಡಬ್ಲ್ಯೂಃ 01

ಶ್ರೀ ವೆಂಕಟಚಲ

ದಿನಾಂಕಃ 29.07.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು – ಶ್ರೀ ಎಂ.ಆರ್.ಕೆ ವಕೀಲರಿಂದ (ಪ್ರತಿವಾದಿಗಳ ಪರ):

4ನೇ ಪ್ರತಿವಾದಿ ಆಲಮ್ಮನವರ ಮಗಳು ಮಂಜುಳ ರವರ ಗಂಡನ ಹೆಸರು ಸೀತರಾಮ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಂಜುಳ ರವರನ್ನು ಅವರ ತಂದೆ ಬೆಂಗಳೂರಿನಲ್ಲಿ ಆಶ್ರಮಕ್ಕೆ ಸೇರಿಸಿರುತ್ತಾರೆ. ಸದರಿ ಮಂಜುಳರವರನ್ನು ಬೆಂಗಳೂರಿನ ಆಶ್ರಮಕ್ಕೆ ಸೇರಿಸಿರುವ ಬಗ್ಗೆ ನಮ್ಮ ದಾವಾ ಪತ್ರದಲ್ಲಿ ನಮೂದಿಸಿರುವುದಿಲ್ಲ. ಮಂಜುಳ ರವರು ಬದುಕಿದ್ದು ಅವರಿಗೆ ಪ್ರಿಯಾಂಕ ಮತ್ತು ಕೀರ್ತನ ಎಂಬ ಮಕ್ಕಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವ ಸಲ್ಲಿಸುವ ಸಂದರ್ಭದಲ್ಲಿ ಎಲ್ಲಾ ಪಕ್ಷಗಾರರ ಕುರಿತು ಕೇಳಿ ವಿಚಾರಣೆಮಾಡಲು ನನಗೆ ಯಾವುದಾದರು ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿಯು ಅವರ ಕುಟುಂಬದವರು ಮಂಜುಳ ರವರು ಮರಣ ಹೊಂದಿರುತ್ತಾರೆಂದು ಎಂದು ಹೇಳಿದ ಕಾರಣದಿಂದ ಈ ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಮಂಜುಳ ರವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಲು ನಿಮಗೆ ಯಾವುದಾದರು ತೊಂದರೆ ಇರುತ್ತದೆಯೇ ಎಂದರೆ ಸಾಕ್ಷಿಯು ಆಲಮ್ಮನವರ ಮನೆಯಲ್ಲಿ ಮಂಜುಳ ರವರ ಕುರಿತು ಯಾವುದೇ ದಾಖಲೆ ಇರುವುದಿಲ್ಲ ಹಾಗೂ ಅವರಿಗೆ ಮಂಜುಳ ರವರು ಬದುಕಿರುವ ಬಗ್ಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಮಂಜುಳ ರವರು ಬದುಕಿದ್ದು, ಅವರಿಗೆ ಇಬ್ಬರು ಮಕ್ಕಳಿದ್ದರು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮಗೂ ಮತ್ತು 3ನೇ ಪ್ರತಿವಾದಿಗಳ ನಡುವೆ ಈ ಜಮೀನಿನ ವಿಚಾರವಾಗಿ ಸಿ.ಸಿ 238/2017 ಮತ್ತು ಸಿ.ಸಿ 536/2018 ರಂತೆ ಪ್ರಕರಣಗಳು ಬಾಕಿ ಇರುತ್ತವೆ ಎಂದರೆ ಸರಿ. ಸುಂಡ್ರಳ್ಳಿ ಗ್ರಾಮ, ಕುಣ್‌ಚಿಟ್ಟಿಗರ ಬೀದಿಯಲ್ಲಿ ಪೂರ್ವಕ್ಕೆ-ಸಿದ್ದೇಗೌಡರ ಮನೆ, ಪಶ್ಚಿಮಕ್ಕೆ –ಚಿಕ್ಕೆಗೌಡರ ಮನೆ,

ದಕ್ಷಿಣಕ್ಕೆ –ಚಿಕ್ಕವೆಂಕಟೇಗೌಡರ ಮನೆ, ಉತ್ತರಕ್ಕೆ –ತಿರುಗಾಡುವ ಬೀದಿ, ಪೂರ್ವ – ಪಶ್ಚಿಮ 40 ಮೊಳ, ಉತ್ತರ –ದಕ್ಷಿಣ 30 ಮೊಳ ಆಸ್ತಿ ಇದೆ ಎಂದರೆ ಸರಿ. ಸದರಿ ಆಸ್ತಿಯನ್ನು ದಿಃ01.04.1983 ರ ಕ್ರಯಪತ್ರದಂತೆ 3ನೇ ಪ್ರತಿವಾದಿಯವರ ಹೆಸರಿನಲ್ಲಿ ಖರೀದಿಸಿದ ಆಸ್ತಿ ಎಂದರೆ ಸಾಕ್ಷಿಯು ನಮ್ಮ ಅಜ್ಜಿ ಕೆಂಚಮ್ಮ ಮತ್ತು ತಾತ ತಿಮ್ಮದಾಸೇಗೌಡರವರುಗಳು ಸಂಪಾದಿಸಿದ ಆಸ್ತಿ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಕೆಂಚಮ್ಮ ಮತ್ತು ತಿಮ್ಮದಾಸೇಗೌಡರವರು ಸಂಪಾದಿಸಿದ್ದು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸದರಿ ಆಸ್ತಿಯು ದಾವಾ ಸಲ್ಲಿಸಿರುವ ಸಂದರ್ಭಕ್ಕೆ ಯಾರ ಹೆಸರಿನಲ್ಲಿತ್ತು ಮತ್ತು ಯಾರು ಕ್ರಯಕ್ಕೆ ಪಡೆದಿರುತ್ತಾರೆಂದು ನನಗೆ ಆಸ್ತಿ ನಂಬರ್ ಗೊತ್ತಿಲ್ಲದ ಕಾರಣ ತಿಳಿದುಕೊಂಡಿರುವುದಿಲ್ಲ. ಸದರಿ ಆಸ್ತಿಯ ಬಗ್ಗೆ ನನಗೆ ಗೊತ್ತಿದ್ದರು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತೆಳ್ಳನೂರು ಗ್ರಾಮದ ಸರ್ವೆ ನಂಃ 543 ರ ಆಸ್ತಿಯನ್ನು ನನ್ನ ತಂದೆ ಆಲೇಗೌಡ ಹಾಗೂ ಅಣ್ಣ 2ನೇ ಪ್ರತಿವಾದಿ ರವರು ದಿನಾಂಕಃ07.01.1975 ರಂದು ಚಿಕ್ಕೇಗೌಡನ ಮಗ ಚಿಕ್ಕೇಗೌಡ ಎಂಬುವವನಿಗೆ ಆಧಾರ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವು ನನಗೆ ಗೊತ್ತಿದ್ದರು ದಿಃ07.01.1975ರ ಆಧಾರ ಪತ್ರದಲ್ಲಿ ಸದರಿ ಆಸ್ತಿಯು ತಿಮ್ಮೆದಾಸೇಗೌಡ ರವರ ಭಾಗದ ಭೂಮಿ ಎಂದು ನಮೂದಾಗಿರುವ ಕಾರಣ ಈ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ತೆಳ್ಳನೂರು ಗ್ರಾಮದಲ್ಲಿ ಪೂರ್ವಕ್ಕೆ -ಬೊಮ್ಮೇಗೌಡರ ಜಮೀನು, ಪಶ್ಚಿಮಕ್ಕೆ-ನನ್ನ ಸ್ವಂತಕ್ಕೆ ಇರುವ ಜಮೀನು, ಉತ್ತರಕ್ಕೆ -ಬೊಮ್ಮೇಗೌಡರ ಜಮೀನು, ದಕ್ಷಿಣಕ್ಕೆ -ರಸ್ತೆ ಚೆಕ್ಕುಬಂದಿಗೆ ಒಳಪಟ್ಟ ಸರ್ವೆ ನಂಬರ್ 551 ರ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು ದಿಃ04.02.1981 ರಂದು ನಮ್ಮ ತಾಯಿ ತಿಮ್ಮಮ್ಮ ಹಾಗೂ ತಂದೆ ಹಾಲೇಗೌಡರವರು 3ನೇ ಪ್ರತಿವಾದಿ ಆಲೇಗೌಡ ರವರ ಪರವಾಗಿ ಸಿದ್ಧಶೆಟ್ಟಿ ರವರ ಮಗ ಗುರುಬಸವಶೆಟ್ಟಿ ರವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ತಾಯಿ ತಿಮ್ಮಮ್ಮ ನವರು ಕ್ರಯಕ್ಕೆ ಪಡೆದಿರುವ ಆಸ್ತಿಯೆಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ನಮ್ಮ ತಾಯಿ ತಿಮ್ಮಮ್ಮನವರು ಕ್ರಯಕ್ಕೆ ಪಡೆದ ಆಸ್ತಿಯೆಂದು ತೋರಿಸಲು ನಾನು ಯಾವುದೇ ದಾಖಲೇ

ಹಾಜರುಪಡಿಸಿರುವುದಿಲ್ಲ. ದಾವ ಸಲ್ಲಿಸುವ ಸಂದರ್ಭಕ್ಕೆ ಸದರಿ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ.

ಪ್ರತಿವಾದಿ-3 ರವರು ಪ್ರತಿವಾದಿ-8 ರವರಿಗೆ ಸರ್ವೆ ನಂಬರ್ 537ಕ್ಕೆ ಸಂಬಂಧಿಸಿದಂತೆ ಕ್ರಯ ಮಾಡಿರುವ ಕ್ರಯಪತ್ರವನ್ನು ನಾನು ಹಾಜರು ಪಡಿಸಿದ್ದು ಸದರಿ ಕ್ರಯಪತ್ರವನ್ನು ನಿಪಿ-7 ಎಂದು ಈಗಾಗಲೇ ಗುರುತಿಸಲಾಗಿದೆ. ನಿಪಿ-7 ರ ಕ್ರಯಪತ್ರದಲ್ಲಿ ಸರ್ವೆ ನಂಬರ್ 537 ರ ಆಸ್ತಿಯು ಪ್ರತಿವಾದಿ-3 ರವರ ಸ್ವಯಾರ್ಜಿತ ಆಸ್ತಿಯೆಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿ -3 ಮತ್ತು 8 ರವರು ಡಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನನ್ನ ವಿರುದ್ಧ ದಾವೆ ದಾಖಲಿಸಿರುತ್ತಾರೆ ಎಂದರೆ ಸರಿ. ನಾನು ಸದರಿ ದಾವೆಯ ಸಾಕ್ಷಿ ವಿಚಾರಣೆಗೆ ಒಳಗೊಂಡಿರುತ್ತೇನೆ. ಪ್ರತಿವಾದಿ-3 ರವರು ಪ್ರತಿವಾದಿ-8 ರವರಿಗೆ ಸರ್ವೆ ನಂಬರ್ 532/ಎ ಗೆ ಸಂಬಂಧಿಸಿದಂತೆ ಕ್ರಯ ಮಾಡಿರುವ ಕ್ರಯಪತ್ರವನ್ನು ನಾನು ಹಾಜರು ಪಡಿಸಿದ್ದು ಸದರಿ ಕ್ರಯಪತ್ರವನ್ನು ನಿಪಿ-8ಎಂದು ಈಗಾಗಲೇ ಗುರುತಿಸಲಾಗಿದೆ.

ದಾವಾ ಬಿ ಮತ್ತು ಸಿ ಸ್ವತ್ತುಗಳಿಗೆ ಸಂಬಂಧಿಸಿದಂತೆ 1981-82 ಸಾಲಿನಲ್ಲಿ ಎಂ.ಆರ್ ನಂಬರ್ 165/1981-82 ರಂತೆ ಪ್ರತಿವಾದಿ 3 ರವರ ಹೆಸರಿಗೆ ಖಾತೆ ದಾಖಲಾಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ದಾವಾ ಬಿ ಮತ್ತು ಸಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಾನು ಕೈಬರವಣಿಗೆಯ ಪಹಣಿಗಳನ್ನು ಪಡೆದುಕೊಂಡಿರುವುದಿಲ್ಲ.

ದಾವ ಸಲ್ಲಿಸುವ ಸಂದರ್ಭದಲ್ಲಿ ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ಎಲ್ಲಾ ದಾಖಲಗಳನ್ನು ಪಡೆದುಕೊಂಡು ಪರಿಶೀಲಿಸಲು ನನಗೆ ಯಾವುದಾದರೂ ತೊಂದರೆ ಇತ್ತೇ ಎಂದರೆ ಸಾಕ್ಷಿಯು ನಾನು ಅವಿದ್ಯಾವಂತನಾಗಿರುವುದರಿಂದ ಪಡೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸಲ್ಲಿಸುವ ಸಂದರ್ಭಕ್ಕೆ ದಾವ ಸಲ್ಲಿಸಲು ಯಾವಯಾವ ದಾಖಲೆಗಳು ಬೇಕಾಗಿರುತ್ತದೆ ಎಂದು ನನ್ನ ವಕೀಲರನ್ನು ಕೇಳಿ ತಿಳಿದುಕೊಂಡಿರುತ್ತೇನೆಯೇ ಎಂದರೆ ನನಗೆ ನೆನಪಿಲ್ಲ. ದಾವಾ ಸ್ವತ್ತುಗಳ ದಾಖಲೆಗಳಲ್ಲಿ ಈಗಾಗಲೇ ಭಾಗ

ಆಗಿರುವುದರ ಬಗ್ಗೆ ನಮೂದಿರುವ ಕಾರಣ ಎಲ್ಲಾ ದಾಖಲೆಗಳನ್ನು ಪಡೆದುಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸಿ ಷೆಡ್ಯೂಲ್ ಆಸ್ತಿಯು ನಮ್ಮ ತಾಯಿ ಕೆಂಚಮ್ಮನವರ ಹೆಸರಿನಲ್ಲಿ ಕ್ರಯವಾಗಿರುವ ಆಸ್ತಿಯೆಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ